Transfer of Officials in the Police Department.

*Q.—164. Sri D. H. RUDRAPPA (Kadur).—

Will the Government be pleased to state:—

the number of Inspectors, Deputy Superintendents and District Superintendents of Police who have been transferred from place to place within a term of three months, six months and a year during the year 1957-58?

A.—Sri B. D. JATTI (Chief Minister).—

	D.S.P.	Dy.S P.	P.I.
Transferred within three months.	1	2	4
Transferred within six months.	Nil	Nil	4
Transferred within one year.	1	1	1

ಶ್ರೀ ಡಿ. ಎಚ್. ರುದ್ರಪ್ಪ.—ಮೂರು ವರ್ಷಗಳಾದ ಮೇಲೆ ವರ್ಗಮಾಡಬೇಕೆಂದು ನಿಯಮವಿರುವಾಗ ಮೂರು ತಿಂಗಳೊಳಗೇ ವರ್ಗಾಯಿಸಲು ಕಾರಣ ವೇನು?

ಶ್ರೀ ಬಿ. ಡಿ. ಜತ್ತಿ.—ಸಾಮಾನ್ಯವಾಗಿ ಮೂರು ವರ್ಷದ ನಿಯಮವನ್ನು ಪಾಲಿಸುತ್ತಿದೆ. ಇಂಡಿಯಾ ಸರ್ಕಾರಕ್ಕೆ ಡೆಪ್ಯುಟೇಷನ್ ಕಳುಹಿಸುವುದು ಮುಂತಾದ ವಿಶೇಷ ಸಂದರ್ಭಗಳಲ್ಲಿ ಮಾತ್ರ ಜಾಗ್ರತೆ ವರ್ಗಾಯಿಸಬೇಕಾಗುತ್ತದೆ.

ಶ್ರೀ ಡಿ. ಎಚ್. ರುದ್ರಪ್ಪ.—ಇನ್‌ಸ್ಪೆಕ್ಟರುಗಳು ಮತ್ತು ಡಿ. ಎಸ್. ಪಿ. ಗಳನ್ನು ವರ್ಗ ಮಾಡುವವರು ಯಾರು?

ಶ್ರೀ ಬಿ. ಡಿ. ಜತ್ತಿ.—ಇನ್‌ಸ್ಪೆಕ್ಟರುಗಳನ್ನು ಐ. ಜಿ. ಪಿ. ಯೂ, ಡಿ. ಎಸ್. ಪಿ. ಗಳನ್ನು ಸರ್ಕಾರದ ವರೂ ವರ್ಗಮಾಡುತ್ತಾರೆ. ಪ್ರಮೋಷನ್ ಆದರೆ ಮೂರು ತಿಂಗಳು ಅಥವಾ ಆರು ತಿಂಗಳಲ್ಲಿ ಬದಲಾವಣೆಯಾಗಬಹುದು.

ಶ್ರೀ ಡಿ. ಎಚ್. ರುದ್ರಪ್ಪ.—ವರ್ಗವಾಗಿರುವುದಾಗಿ ತಿಳಿಸಿರುವವರಿಗೆಲ್ಲಾ ಪ್ರಮೋಷನ್ ಸಿಕ್ಕಿದೆಯೆ?

ಶ್ರೀ ಬಿ. ಡಿ. ಜತ್ತಿ.—ಒಂದೆರಡು ಸಂದರ್ಭಗಳಲ್ಲಿ ಬೇರೆ ರೀತಿ ಆಗಿರಬಹುದು.

ಶ್ರೀ ಡಿ. ಎಚ್. ರುದ್ರಪ್ಪ.—ಹೀಗೆ ಬೇಗ ಬೇಗ ವರ್ಗಾವಣೆ ಮಾಡುವುದರಿಂದ ಶಾಂತಿಗೆ ಧಕ್ಕೆ ಬರುವುದಿಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಅಂಥ ಸಂದರ್ಭಗಳೇನೂ ಕಂಡುಬಂದಿಲ್ಲ.

Export of Iron ore from Bhadravathi.

*Q.—198. Sri S. KARIAPPA (Virupakshipur).—

Will the Government be pleased to state:—

(a) whether there is any proposal to export iron ore from Kemmangundi, Bhadravathi;

(b) if so, the places to which it is proposed to be exported?

A.—Sri B. D. JATTI (Chief Minister).—

(a) A proposal to export iron ore from Kemmangundi is under examination.

(b) The information regarding the countries to which the ore would be exported is not available.

ಶ್ರೀ ಎಸ್. ಕರಿಯಪ್ಪ.—ಈಗ ಭದ್ರಾವತಿ ಕಬ್ಬಿಣದ ಕಾರ್ಖಾನೆಗಾಗಿ ತಾನೆ ಕೆಮ್ಮಣ್ಣುಗುಂಡಿಯಿಂದ ಕಬ್ಬಿಣದ ಅದುರನ್ನು ತೆಗೆಯುತ್ತಿರುವುದು?

ಶ್ರೀ ಬಿ. ಡಿ. ಜತ್ತಿ.—ಹೌದು.

ಶ್ರೀ ಎಸ್. ಕರಿಯಪ್ಪ.—ಇನ್ನು ಮುಂದೆ ಬೇರೆ ಯಾವ ಕಡೆಯಿಂದ ಈ ಅದುರನ್ನು ಸರಬರಾಯಿ ಮಾಡ ಬೇಕೆಂದು ಆಲೋಚಿಸಲಾಗಿದೆ?

ಶ್ರೀ ಬಿ. ಡಿ. ಜತ್ತಿ.—ಇನೂ ಅನೇಕ ವರ್ಷ ಆ ಪ್ರಸಂಗ ಬರುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಕೆಮ್ಮಣ್ಣುಗುಂಡಿಯಿಂದ ಅದುರನ್ನು ಬೇರೆ ದೇಶಕ್ಕೆ ರಫ್ತು ಮಾಡಿದರೆ ಭದ್ರಾವತಿ ಕಾರ್ಖಾನೆಗೆ ಅಭಾವವುಂಟಾಗುವುದಿಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಅದನ್ನು ಸ್ವಲ್ಪ ವಿಚಾರ ಮಾಡಿ ನೋಡಿ ನಿರ್ಧಾರಮಾಡಿದೆ. ಅಲ್ಲಿ ಸಾಕಷ್ಟು ಅದುರಿದೆ. Grade of ore lower quality ಆಗಿರುವುದರಿಂದ ಮಾರಿದರೆ ಲಾಭ ಬರಬಹುದು ಎಂಬುದಾಗಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈಗ ಹೊರಕ್ಕೆ ಕಳುಹಿಸಿದರೆ ಎಷ್ಟು ವರಮಾನ ನಿರೀಕ್ಷಿಸಬಹುದು?

ಶ್ರೀ ಬಿ. ಡಿ. ಜತ್ತಿ.—ಈಗ ವರಮಾನದ ಪ್ರಶ್ನೆ ಬರುವುದಿಲ್ಲ.

ಶ್ರೀ ಡಿ. ಟಿ. ಸೀತಾರಾಮರಾವ್.—ಹೊರಗಡೆಗೆ ರಫ್ತು ಮಾಡುವುದರ ಉದ್ದೇಶವೇನು?

ಶ್ರೀ ಬಿ. ಡಿ. ಜತ್ತಿ.—ಫಾರಿನ್ ಎಕ್ಸ್‌ಛೇಂಜ್ ಗಾಗಿ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಎಷ್ಟು ವರ್ಷ ಗಳವರೆಗೆ ಕೆಮ್ಮಣ್ಣುಗುಂಡಿಯಲ್ಲಿ ಕಬ್ಬಿಣದ ಅದುರು ಸಿಕ್ಕಬಹುದೆಂಬ ಅಭಿಪ್ರಾಯವಿದೆ?

ಶ್ರೀ ಬಿ. ಡಿ. ಜತ್ತಿ.—ಇನ್ನೂ ನೂರಾರು ವರ್ಷ ಕಡಮೆಬೀಳುವುದಿಲ್ಲ ವೆಂದು ಹೇಳುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಬಹಳ ಕಡಮೆ ದರ್ಜೆಯ ಅದುರಾದರೆ ಅದನ್ನು ಯಾರೂ ಕೇಳುವುದಿಲ್ಲ, ಅಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಅಂಥಾದ್ದನ್ನು ಸಾಮಾನ್ಯವಾಗಿ ಹೊರದೇಶದವರು ತೆಗೆದುಕೊಳ್ಳಲು ಒಪ್ಪುವುದಿಲ್ಲ. ಈಗ ಅಗ್ರಿಮೆಂಟಿಗೆ ಬರುವ ಸಂಭವವಿದೆ; ಬಂದರೆ ನಮಗೆ ಲಾಭ.

Sri J. B. MALLARADHYA.—Will the Government kindly negotiate with the State Trading Corporation to get a fair quota that they have entered into with the Japanese Government?